## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಹೊಳಲ್ಕೆರೆ

## ಸಿ.ಸಿ. ನಂ. 1609/2022

ದಿನಾಂಕ - 04/06/2024

| | | | | | |
|---|---|---|---|---|---|
| ಸಾಕ್ಷಿದಾರರ ಹೆಸರು | - | ದೀಪ | ಪ್ರಾ.ಸಾ. | – | 05 |
| ತಂದೆಯ ಹೆಸರು | - | ಕೆಂಚಪ್ಪ | ಚಾ.ಸಾ. | – | 10 |
| ವಯಸ್ಸು | - | 19 ವರ್ಷ | | | |
| ಉದ್ಯೋಗ | - | ಮನೆ ಕೆಲಸ | | | |
| ವಾಸ ಸ್ಥಳ | - | ಕಡ್ಲೆಗುದ್ದು ಗ್ರಾಮ | | | |

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**- ಮುಖ್ಯ ವಿಚಾರಣೆ - ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ -**

ನ್ಯಾಯಾಲಯದ ಮುಂದಿರುವ ಇರುವ ಆರೋಪಿ ನನಗೆ ಗೊತ್ತಿಲ್ಲ. ಚಾಸಾ–**1** ಗೊತ್ತು ನನ್ನ ಮಾವ. ಚಾಸಾ–**9** ನನ್ನ ಅಜ್ಜಿ. ಚಾಸಾ–**11** ರಿಂದ **21** ಗೊತ್ತು. ಅವರು ನಮ್ಮ ಗ್ರಾಮಸ್ಥರು. ಮೃತ ಧನುಷ್ ನನ್ನ ಅಕ್ಕನ ಮಗ. ಸದರಿ ಧನುಷ್ ಈಗ್ಗೆ **2** ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ. ಈಗ್ಗೆ **2** ವರ್ಷಗಳ ಹಿಂದೆ ನಾವು ನಮ್ಮ ಸಂಬಂಧಿಕರಾದ ಭೀಮಸಮುದ್ರ ಗ್ರಾಮದ ದೀಪ ಗಂಡ ರಂಗಪ್ಪ ಎಂಬುವರು ಹರಪನಹಳ್ಳಿ ತಾಲ್ಲೂಕು ಉಚ್ಚಂಗಿದುರ್ಗ ದೇವಾಲಯದಲ್ಲಿದೇವರ ಕಾರ್ಯ ಇಟ್ಟುಕೊಂಡಿದ್ದು ನಮ್ಮನ್ನು ಕರೆದಿದ್ದರು. ನಾವೂ ಸಹ ಸದರಿ ದೇವರ ಕಾರ್ಯಕ್ಕೆ ಟ್ರಾಕ್ಟರ್ ನಲ್ಲಿ ಹೋಗಿದ್ದೆವು. ಸದರಿ ಟ್ರಾಕ್ಟರನ್ನು ಯಾರು ಓಡಿಸುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಸದರಿ ಟ್ರಾಕ್ಟರ್ ಮತ್ತು ಟ್ರೈಲರ್ ನಂಬರ್ ನನಗೆ ಗೊತ್ತಿಲ್ಲ. ಸದರಿ ಟ್ರಾಕ್ಟರ್ ಅಪಘಾತ ಆಗಿರುತ್ತದೆ. ಸದರಿ ಟ್ರಾಕ್ಟರ್ ಅಪಘಾತವಾಗಿದ್ದು , ಸದರಿ ಅಪಘಾತದಲ್ಲಿ ನನ್ನ ಅಕ್ಕನ ಮಗ ಧನುಷನಿಗೆ ತೀವ್ರವಾಗಿ ಪೆಟ್ಟು ಬಿದ್ದು ರಕ್ತಗಾಯಗಳಾಗಿದ್ದು, ಸದರಿ ಅಪಘಾತದಿಂದ ನನ್ನ ಅಕ್ಕನ ಮಗ ಧನುಷ್ ಮೃತಪಟ್ಟಿರುತ್ತಾನೆ. ಸದರಿ ಟ್ರಾಕ್ಟರ್ ನಲ್ಲಿದ್ದ ಎಲ್ಲರಿಗೂ ಸಣ್ಣ ಪುಟ್ಟ ಗಾಯಗಳಾಗಿರುತ್ತವೆ. ನಾನು ಈ ಪ್ರಕರಣಕ್ಕೆ ಸಂಬಧಿಸಿದಂತೆ ಯಾವುದೇ ಮರು ಹೇಳಿಕೆ, ಹೇಳಿಕೆ ನೀಡಿಲ್ಲ. ಸದರಿ ಅಪಘಾತ ಯಾರ ತಪ್ಪಿನಿಂದ ಆಗಿರುತ್ತದೆ ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯು ತನ್ನ ಹೇಳಿಕೆಗೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರುತ್ತಾರೆ. ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಮಾನ್ಯ ಸ.ಸ.ಅ ರವರಿಂದಃ**

ದಿಃ**12.04.2022** ರಂದು ನಾವು ನಮ್ಮ ಸಂಬಂಧಿಕರಾದ ಭೀಮಸಮುದ್ರ ಗ್ರಾಮದ ದೀಪ ಗಂಡ ರಂಗಪ್ಪ ಎಂಬುವರು ಹರಪನಹಳ್ಳಿ ತಾಲ್ಲೂಕು ಉಚ್ಚಂಗಿದುರ್ಗ ದೇವಾಲಯದಲ್ಲಿದೇವರ ಕಾರ್ಯ ಇಟ್ಟುಕೊಂಡಿದ್ದು ನಮ್ಮನ್ನು ಕರೆದಿದ್ದರು ಎಂದರೆ ಸರಿ. ನಾವು ದಿನಾಂಕ **11/04/2022** ರ ಸಂಜೆ ಭೀಮಸಮುದ್ರದಿಂದ ಉಚ್ಚಂಗಿದುರ್ಗಕ್ಕೆ ಹೋಗಲೆಂದು ಕೆಂಪು ಬಣ್ಣದ ನಂಬರ್ ಬರೆಸಿರದ ಟ್ರಾಕ್ಟರ್ ಮತ್ತು ಟ್ರೈಲರ್ ನಂಬರ್ ಕೆಎ**–16–**ಟಿ**–4197** ನಂಬರಿನ ಟ್ರೈಲರ್ ನಲ್ಲಿ ಹೊರಟೆವು ಎಂದರೆ ಸರಿಯಲ್ಲ. ಸದರಿ ಟ್ರಾಕ್ಟರ್ ಮತ್ತು ಟ್ರೈಲರ್ ಅನ್ನು ನ್ಯಾಯಾಲಯದ ಮುಂದಿರುವ ಆರೋಪಿ ಚಾಲನೆ ಮಾಡುತ್ತಿದ್ದನು ಎಂದರೆ ಸರಿಯಲ್ಲ. ಸದರಿ ಟ್ರೈಲರ್ ನಲ್ಲಿ ನಾನು**,** ನನ್ನ ಅಕ್ಕನ ಮಗ ಧನುಷ್**,** ಚಾಸಾ**–21** ಮತ್ತು ನನ್ನ ಸಂಬಂಧಿಕರು ಕುಳಿತುಕೊಂಡಿದ್ದೆವು ಎಂದರೆ ಸರಿ. ಸದರಿ ಟ್ರಾಕ್ಟರ್ ಟ್ರೈಲರ್ ನಲ್ಲಿ ಸುಮಾರು **20** ಕ್ಕೂ ಹೆಚ್ಚು ಜನ ಕುಳಿತುಕೊಂಡಿದ್ದೆವು ಎಂದರೆ ಸರಿಯಲ್ಲ. ಸದರಿ ಟ್ರಾಕ್ಟರ್ ನಲ್ಲಿ ದಿಃ **11/04/2022** ರಂದು ಸಂಜೆ **4** ಗಂಟೆ ಸಮಯದಲ್ಲಿ ನಾವೆಲ್ಲರೂ ಒಟ್ಟಿಗೆ ಭೀಮಸಮುದ್ರ ಗ್ರಾಮವನ್ನು ಬಿಟ್ಟು ಹೊರಟೆವು ಎಂದರೆ ಸರಿಯಲ್ಲ. ನಂತರ ಭೀಮಸಮುದ್ರದಿಂದ ಹಿರೇಕಂದವಾಡಿ ಗ್ರಾಮದ ಮಾರ್ಗವಾಗಿ ಸದರಿ ಟ್ರಾಕ್ಟರ್ ನಲ್ಲಿ ಹೋಗುತ್ತಿರುವಾಗ ಅದೇ ದಿನ ಸಂಜೆ **5** ಗಂಟೆ ಸಮಯದಲ್ಲಿ ಹಿರೇಕಂದವಾಡಿ ಗ್ರಾಮದ ಹತ್ತಿರ ಟಾರ್ ರಸ್ತೆಯಲ್ಲಿ ಹೋಗುತ್ತಿರುವಾಗ ಸದರಿ ಟ್ರಾಕ್ಟರ್ ನ ಚಾಲಕನು ರಸ್ತೆಯ ತಿರುವಿನಲ್ಲಿ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿ ಸದರಿ ಟ್ರಾಕ್ಟರ್ ಮತ್ತು ಟ್ರೈಲರ್ ಅನ್ನು ರಸ್ತೆಯ ಎಡಬದಿಗೆ ಪಲ್ಟಿ ಹೊಡೆಸಿದ್ದರಿಂದ ಸದರಿ ಟ್ರಾಕ್ಟರ್ ನಲ್ಲಿದ್ದ ಎಲ್ಲರೂ ಸಹ ಕೆಳಗೆ ಬಿದ್ದು ರಕ್ತಗಾಯಗಳಾಗಿರುತ್ತವೆ ಎಂದರೆ ಸರಿಯಲ್ಲ. ಸದರಿ ಅಪಘಾತದಲ್ಲಿ ನನ್ನ ಅಕ್ಕನ ಮಗ ಧನುಷ್ ನಿಗೆ ತಲೆಗೆ**,** ಮೈಕೈಗೆ ತೀವ್ರ ಸ್ವರೂಪದ ರಕ್ತಗಾಯಗಳಾಗಿದ್ದವು ಎಂದರೆ ಸರಿ. ನಂತರ ನಮ್ಮನ್ನೆಲ್ಲ ಉಪಚರಿಸಿ ಹೊಳಲ್ಕೆರೆ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು ಎಂದರೆ ಸರಿಯಲ್ಲ. ಹೊಳಲ್ಕೆರೆ ಸರ್ಕಾರಿ ಆಸ್ಪತ್ರೆಯಲ್ಲಿ ನನ್ನ ಅಕ್ಕನ ಮಗ ಧನುಷ್ ನನ್ನು ಪರೀಕ್ಷಿಸಿದ ವೈದ್ಯರು ನನ್ನ ಅಕ್ಕನ ಮಗ ಧನುಷ್ ಮಾರ್ಗಮಧ್ಯೆ ಮೃತಪಟ್ಟಿರುವುದಾಗಿ

ತಿಳಿಸಿರುತ್ತಾರೆ ಎಂದರೆ ಸರಿ. ನಾವು ಹೋಗುತ್ತಿದ್ದ ಟ್ರಾಕ್ಟರ್ ಇಂಜಿನ್ ಗೆ ನಂಬರ್ ಬರೆಸಿರಲಿಲ್ಲ ಎಂದರೆ ಸರಿಯಲ್ಲ. ನಂತರ ಸದರಿ ಟ್ರಾಕ್ಟರ್ ನಂಬರ್ ಕೆಎ**–16–**ಟಿಸಿ**–6928** ಆಗಿತ್ತು ಎಂದು ಗೊತ್ತಾಯಿತು ಎಂದರೆ ಸರಿಯಲ್ಲ. ಆ ದಿನ ನಾವು ಹೋಗುತ್ತಿದ್ದ ಟ್ರಾಕ್ಟರ್ ಮತ್ತು ಟ್ರೈಲರ್ ಅನ್ನು ನ್ಯಾಯಾಲಯದ ಮುಂದಿರುವ ಆರೋಪಿಯೇ ವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿ ಅಪಘಾತಪಡಿಸಿರುತ್ತಾನೆ ಎಂದರೆ ಸರಿಯಲ್ಲ. ಸದರಿ ಅಪಘಾತ ಆರೋಪಿಯ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿಯಲ್ಲ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿಃ **20/05/2022** ರಂದು ಈ ಮೇಲೆ ಹೇಳಿದಂತೆ ನಿಪಿ**–10** ರಂತೆ ಪೊಲೀಸರ ಮುಂದೆ ಹೇಳಿಕೆ ಕೊಟ್ಟಿರುತ್ತೇನ ಎಂದರೆ ಸರಿಯಲ್ಲ. ನಿಪಿ**–10** ರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಆರೋಪಿ ಪರ ವಕೀಲರಿಂದ ಪಾಟೀ ಸವಾಲು: ಇಲ್ಲಃ**

**ಮರು ವಿಚಾರಣೆ :ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚುಪಡಿಸಿದೆ)

ಓ ಹೇ ಕೇ ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹೊಳಲ್ಕೆರೆ.